ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಇಲ್ಲೀಗಲ್ ಮೈನಿಂಗ್ ನಡೆಯುತ್ತಿದೆ ಎಂದು ಹೇಳಿದ್ದಾರೆ. ನಾನು ಅವರಿಗೆ ಇವರ ಆಧಾಯದ ಅಂಕಿಅಂಶಗಳನ್ನು ಓದಗಿಸಿಕೊಡುವುದಾದರೆ, 1956-57ರಲ್ಲಿ ಸುಮಾರು 16 ಲಕ್ಷ ರೂಪಾಯಿಗಳ ರಾಯಲ್ಟಿ ಬಂದಿದೆ. 1971-72ರಲ್ಲಿ 98 ಲಕ್ಷ ರೂಪಾಯಿಗಳ ರಾಯಲ್ಟಿ ಬಂದದ್ದು 1976-77 ರಲ್ಲಿ 3 ಕೋಟಿ 40 ಲಕ್ಷ ರೂಪಾಯಿಗೆ ಏರಿದೆ. ಇದರಿಂದ ಇಲ್ಲೀಗಲ್ ಮೈನಿಂಗ್‌ಗೆ ಸೂಕ್ತವಾದಂಥ ತಡೆ ಹಾಕಿದ್ದೇವೆ ಎನ್ನುವುದು ಕೊಂಚ ಮಟ್ಟಿಗೆ ಗೊತ್ತಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಮೈನಿಂಗ್ ಲೀಸ್ ಕೊಡುವಂಥ ಸಂದರ್ಭದಲ್ಲಿ ಹೆಚ್ಚಾಗಿ ಹಣ ಮತ್ತು ಇನ್‌ಫ್ಲೂಯನ್ಸ್ ನಡೆಯುತ್ತದೆ. ಅನೇಕರು ಮೈನಿಂಗ್ ಲೀಸ್ ಪಡೆದು ಅದನ್ನು ಮತ್ತೆ ಸಬ್ ಲೀಸ್ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದಾರೆ ಆದ್ದರಿಂದ ಲೀಸ್ ಕೊಡುವುದನ್ನು ನಿರ್ಬಂಧಿಸಿ ಬೇರೆ ಯಾವುದಾದರೂ ನಿಯಮಾವಳಿಯನ್ನು ರೂಪಿಸಿ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದರಲ್ಲಿ ನಾನಾ ವಿಧವಾದಂಥ ಮೈನಿಂಗ್ ಬರುತ್ತದೆ. ನಾವು ಎಲ್ಲದ್ದಕ್ಕೂ ಸೂಪರ್‌ವೈಸ್ ಮಾಡುವುದಕ್ಕಾಗುವುದಿಲ್ಲ. ರಾಯಲ್ಟಿ ಪಡೆಯುತಕ್ಕೆ ಪ್ರಶ್ನೆ ಏಕೆ ಉದ್ಭವಾಗಿವೆ ಎಂದರೆ, ನಾವು ಮೈನಿಂಗ್ ಲೀಸ್‌ಗೆ ಕೊಡುತ್ತೇವೆ, ಅದಕ್ಕೆ ರಾಯಲ್ಟಿ ನಮಗೆ ಬರುತ್ತದೆ. ಸಬ್ ಲೀಸ್ ಮಾಡುವ ಬಗ್ಗೆ ಏನಾದರೂ ದೂರು ಬಂದರೆ ಅದನ್ನು ವೆರಿಫೈ ಮಾಡುತ್ತೇವೆ, ಮತ್ತು ಲೀಸ್ ನಿರ್ಧಾರ ಮಾಡತಕ್ಕ ಒಂದು ಕಾಯಿದೆಯನ್ನು ನಾವು ನಡೆಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಉತ್ತರ ಕೊಡುತ್ತಾ ಖಾನಗಿಯವರು ಏನೂ ಲಾಭ ಮಾಡುವುದಿಲ್ಲ ಎಂದು ಹೇಳಿದ್ದೀರಿ, ಇದು ನಿಜವೇ ? ಅವರು ಹೇರಳವಾಗಿ ಲಾಭ ಮಾಡಿದ್ದರೆ ಆದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

SRI S. M. KRISHNA —"Whe their they are making heavy profits" ಎಂದು ಅವರು ಹೇಳಿದ್ದಾರೆ. ಅದಕ್ಕೆ ನಾವು 'No' ಎಂದು ಹೇಳಿದ್ದೇವೆ. ಪ್ರಾಫಿಟ್ ಮಾಡುತ್ತಾರೆ, ಪ್ರಾಫಿಟ್ ಇಲ್ಲದೇ ಹೋದರೆ ಯಾರು ಮುಂದೆ ಬರುತ್ತಾರೆ?

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು —ಮೈಸೂರು ಮಿನರಲ್ ಕಾರ್ಪೊರೇಷನ್‌ಗೂ ಮತ್ತು ಡಿಪಾರ್ಟ್‌ಮೆಂಟಿನವರಿಗೂ ಸರಿಯಾದ ಕೋಆರ್ಡಿನೇಷನ್ ಇಲ್ಲ ಎಂದು ಕೇಳಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ.—ಬಹಳ ಒಳ್ಳೆಯ ಕೋಆರ್ಡಿನೇಷನ್ ಇದೆ.

Irrigation tanks in Mysore District

266 SRI K. SIDDAIAH (Santhemarahally) —Will the Minister of State for Minor Irrigation and Protocol be pleased to state :—

(*a*) whether it is a fact that most of the Irrigation tanks have become shallow do to silt formation and soil erosion on account of cultivation and deforestation of tank beds in Mysore District ;

(*b*) whether the Government intend to lease out the tank beds to the landless for raising trees and grass so as to arrest silt formation and a soil erosion and also to encourage aforestation and grass cultivation on the entire tank beds ;

(*c*) whether the Government intend to take measures to encourage farmers to grow trees on the road sides adjacent to their lands and allow them to enjoy the yield from such trees ?

SRI H. C. SRIKANTAIAH (Minister of State for Minor Irrigation and Protocol).—

(*a*) No.

(*b*) No.

(*c*) Yes.

ಶ್ರೀ ಕೆ. ಸಿದ್ದಯ್ಯ.—ಕೆರೆ ಅಂಗಳದಲ್ಲಿ ಮರಗಳು ಮತ್ತು ಪೊಲ್ಲು ಬೆಳೆಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದ್ದೀರಿ. ಈ ಒಂದು ಉದ್ದೇಶಕ್ಕಾಗಿ ಕೆರೆ ಅಂಗಳವನ್ನು ಕೊಡುವುದರಿಂದ ಉಂಟಾಗುವ ತೊಂದರೆ ಏನು ? ಏಕೆಂದರೆ ಈ ಒಂದು ಕೆಲಸವನ್ನು ಖಾಸಗಿಯವರಿಗೆ ಕೊಟ್ಟರೆ ಅದಕ್ಕೆ ಕಾವಲು ಕಾಯುವುದು, ನೋಡಿಕೊಳ್ಳುವುದು ಕಷ್ಟವಾಗುತ್ತದೆ ಆದ್ದರಿಂದ ಈ ಜಾಗಗಳನ್ನು ಪೊಲ್ಲು ಮತ್ತು ಮರಗಳನ್ನು ಬೆಳೆಸುವುದಕ್ಕೆ ಲೀಸ್ ಮಾಡುವುದು ಒಳ್ಳೆಯದು ಅಲ್ಲವೆ ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕೆರೆ ಅಂಗಳವನ್ನು ಈ ಉದ್ದೇಶಕ್ಕೆ ಕೊಡುವುದರಿಂದ ಕೆರೆ ಮುಚ್ಚುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಕೆರೆಗೆ ನೀರೂ ಬರುವುದಿಲ್ಲ, ಆಲ್ಲಿ ಮರ ಗಿಡಗಳನ್ನು ಬೆಳೆಸಿದರೆ ಕೆರೆ ಮುಚ್ಚುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ,

ಶ್ರೀ ಕೆ. ಸಿದ್ದಯ್ಯ.—ಈ ಪ್ರಶ್ನೆಯ (ಇ)ಗೆ ಉತ್ತರವಾಗಿ ಹೌದು ಅಂತ ಹೇಳಿದ್ದೀರಿ. ಅವರಿಗೆ ಯಾವ ರೀತಿ ಉತ್ತೇಜನ ಕೊಡುವುದಕ್ಕೆ ಸಾಧ್ಯ ಅನ್ನುವುದನ್ನು ಹೇಳುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಈ ಬಗ್ಗೆ ಒಂದು ಸರ್ಕಾರಿ ಆಜ್ಞೆ ಹೊರಡಿಸಿದೆ ಅದು ಈ ರೀತಿ ಇದೆ.—"they have already decided as a matter of policy to issue Sannadhs and also to have that on roadsided" ಅವರುಗಳು ತಮ್ಮ ಜಮೀನಿನಲ್ಲಿ ಹಾಕಿಕೊಂಡಿರತಕ್ಕಂಥಾ ಮರಗಳಾಗಲಿ ಅಥವಾ ಹಣ್ಣು ಗಿಡಗಳಾಗಲಿ ಇದ್ದರೆ ಅವರು ಅದರ ಫಲವನ್ನು ಅನುಭವಿಸತಕ್ಕಂಥಾ ಬಗ್ಗೆ ಸರ್ಕಾರ ಈಗಾಗಲೇ ಒಂದು ಆಜ್ಞೆಯನ್ನು ಹೊರಡಿಸಿದೆ.

MADAM SPEAKER.—Questions are over.

Message from the Chairman L.C.

ANNOUNCEMENT

MADAM SPEAKER.—I have received the following Message from the Chairman, Legislative Council.

As required by rule 99 (1) of the Rules of Procedure and conduct of Business in the Karnataka Legislative Council I send herewith the Bangalore Development Authority (Amendment)Bill, 1977 as amended by the Legislative Assembly and agreed to by the Legislative Council on 7th April, 1977.

CALLING ATTENTION TO MATTERS OF URGENT PUBLIC IMPORTANCE

(*i*) ***re*** : *Scarcity of water in Sindgi taluk.*

ಶ್ರೀ ಎಸ್. ವೈ. ಸಾಟೀಲ್ (ಸಿಂದಗಿ).—ಅಧ್ಯಕ್ಷರೇ, ಸಿಂದಗಿ ತಾಲ್ಲೂಕಿನಲ್ಲಿ ನೀರಿನ ತೀವ್ರ ಅಭಾವದ ವಿಚಾರದ ಬಗ್ಗೆ ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ಯದ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ,